**ಅಂತಾರಾಷ್ಟ್ರೀಯ ರಂಗ ಸಂಸ್ಥೆ (ಐ .ಟಿ. ಐ )**

# ವಿಶ್ವ ರಂಗಭೂಮಿ ಸಂದೇಶ ೨೦೧೨

## ಇಸಾಬೆಲ್ಲೆ ಹಾಪರ್ಟ್

**(ಫ್ರಾನ್ಸಿನ ರಂಗಭೂಮಿ ಹಾಗು ಚಲನಚಿತ್ರ ನಟಿ)**



Picture courtesy ©*Sylvie Lancrenon*

ಹೀಗೆ, ನಾವು ಮತ್ತೊಮ್ಮೆ,ಈ ವಸಂತದಲ್ಲಿ, ನಮ್ಮ ಉದ್ಘಾಟನಾ ಸಭೆಯ ೫೦ ವರ್ಷಗಳ ನಂತರ ವಿಶ್ವರಂಗಭೂಮಿ ದಿನಾಚರಣೆಗೆ ಸಮಾವೇಶಗೊಂಡಿದ್ದೇವೆ. ಜಗತ್ತಿನ ಸುತ್ತ ರಂಗಸಂಭ್ರಮವನ್ನಾಚರಿಸಲು ಕೇವಲ ಒಂದು ದಿನ,೨೪ ಗಂಟೆಗಳನ್ನು ಮುಡಿಪಾಗಿಟ್ಟು, ಜಗತ್ತಿನ ರಂಗತಂಡಗಳನ್ನು ಆಕರ್ಷಿಸಿ ರಂಗ ಸಂಸ್ಕೃತಿಯನ್ನು ಗೌರವಿಸುವುದಕ್ಕಾಗಿ ನಾವಿಲ್ಲಿ, ಸರ್ವಶ್ರೇಷ್ಠ ನಗರ ಪ್ಯಾರಿಸ್ ನಲ್ಲಿದ್ದೇವೆ.

ವಿಶ್ವನಗರಿ ಪ್ಯಾರಿಸ್, ಒಂದು ದಿನದ ಸಂಭ್ರಮದಲ್ಲಿ ಜಾಗತಿಕ ರಂಗ ಸಂಸ್ಕೃತಿಯನ್ನು ಒಳಗೊಳ್ಳುವಷ್ಟು ಸಮರ್ಥವಾಗಿದೆ. ನೋಹ್ ಮತ್ತು ಬನ್ರುಕು ಪ್ರಕಾರಗಳು ನಮ್ಮವೇ ಎನಿಸುವುದರ ಮೂಲಕ ಫ್ರಾನ್ಸಿನ ಈ ರಾಜಧಾನಿಯಿಂದ ನಾವು ನೇರವಾಗಿ ಜಪಾನಿಗೆ ಪಯಣಿಸಬಹುದು. ಪೀಕಿಂಗ್ ಒಪೇರಾ ಮತ್ತು ಕಥಕ್ಕಳಿಯತಹ ವೈವಿಧ್ಯಮಯ ವಿಚಾರ, ಭಾವನೆಗಳ ಜಾಡನ್ನು ಹಿಡಿಯಬಹುದು. ಎಸ್ಕಲಸ್ ಮತ್ತು ಇಬ್ಸೆನ್, ಸೊಫಾಕ್ಲೆಸ್ ಮತ್ತು ಸ್ಟ್ರಿಂಡ್ಬರ್ಗ್ ನಮ್ಮನ್ನು ಆವರಿಸುತ್ತಿದ್ದಂತೆ ಗ್ರೀಸ್ ಮತ್ತು ಸ್ಕ್ಯಾಂಡಿನೇವಿಯಾ ದೇಶಗಳ ನಡುವೆ ಸುಳಿದಾಡಲು ಇದು ಅವಕಾಶ ಕಲ್ಪಿಸುತ್ತದೆ. ಸರಾ ಕೇನ್ - ಪಿರೆಂಡಾಲೊ ನಡುವೆ ಪ್ರತಿಧ್ವನಿಸುವಾಗ ಇಟಲಿ ಮತ್ತು ಬ್ರಿಟನ್ ದೇಶಗಳನ್ನು ಜೋಡಿಸುವ ಅವಕಾಶವಿದೆ. ಫ್ರಾನ್ಸಿನಿಂದ ರಷ್ಯಾಕ್ಕೆ, ರಸೀನ್ ಮೋಲಿಯರ್ ನಿಂದ ಚೆಕಾಫ್ ಬಳಿಗೆ ಹೋಗಬಹುದು. ಅಟ್ಲಾಂಟಿಕ್ ಸಾಗರದಾಚೆ ಕ್ಯಾಲಿಫೋರ್ನಿಯಾದ ಕ್ಯಾಂಪಸ್ ಗೆ ಜಿಗಿದು ಅಲ್ಲಿನ ವಿದ್ಯಾರ್ಥಿಯೊಬ್ಬನನ್ನು ರಂಗಭೂಮಿಯಲ್ಲಿ ಹೆಸರು ಗಳಿಸಲು ಸೆಳೆಯಬಹುದು.

ವಾಸ್ತವವಾಗಿ ರಂಗಭೂಮಿ ಎಷ್ಟು ಸಮೃದ್ಧವಾಗಿದೆ ಎಂದರೆ ಜೀವಂತಿಕೆಯಿಂದ ಸ್ಥಳ ಮತ್ತು ಕಾಲವನ್ನು ಮೀರುವಂತಿದೆ. ಸಮಕಾಲೀನ ಪ್ರದರ್ಶನಗಳು ಹಿಂದಿನ ಶತಮಾನಗಳ ಸಾಧನೆಗಳಿಂದ ಪೋಷಿಸಲ್ಪಟ್ಟಿವೆ. ಅತ್ಯಂತ ಶಾಸ್ತ್ರೀಯ ರೆಪೊರ್ಟರಿಗಳು ಸಹ ಹೊಸ ಪ್ರಯೋಗಗಳೊಂದಿಗೆ ಆಧುನಿಕ ಮತ್ತು ಮಹತ್ವದ ಪ್ರದರ್ಶನಗಳಾಗಿ ಕಂಡುಬರುತ್ತವೆ. ರಂಗಭೂಮಿಯು ತನ್ನದೇ ಚಿತಾಭಸ್ಮದಿಂದ ಪುನರ್ಜನ್ಮ ಪಡೆಯುತ್ತದೆ, ಹಳೆಯ ಪದ್ಧತಿಗಳನ್ನು ಕಳಚಿಕೊಂಡು ಆಧುನಿಕ ಪರಿಕಲ್ಪನೆಯಲ್ಲಿ ಜೀವಂತಿಕೆಯನ್ನು ಉಳಿಸಿಕೊಂಡಿದೆ.

ಹಾಗಾಗಿ ವಿಶ್ವರಂಗಭೂಮಿ ದಿನಾಚರಣೆ ಇನ್ನಿತರ ಮೆರವಣಿಗೆಗಳೊಂದಿಗೆ ಥಳುಕು ಹಾಕುವಂತಹ ಸಾಮಾನ್ಯ ದಿನವಲ್ಲ. ತನ್ನ ಜಾಗತಿಕ ಅಗಾಧತೆಯ ಮೂಲಕ ಸ್ಥಳ-ಕಾಲಗಳ ಅನಂತತೆಯ ಸಾಮೀಪ್ಯವನ್ನು ನಮಗೊದಗಿಸುತ್ತದೆ. ಈ ಪರಿಕಲ್ಪನೆಯನ್ನು ಸಾಧ್ಯಗೊಳಿಸಲು ಅಜ್ಞಾತವಾಗುಳಿದ ಮೇಧಾವಿ, ಫ್ರೆಂಚ್ ನಾಟಕಕಾರ ಜಾ ಟಾರ್ಡ್ಯೂ ಅವರ ನುಡಿಗಳನ್ನು ಉಲ್ಲೇಖಿಸಲು ಅನುಮತಿಸಿ. ಸ್ಥಳದ ಬಗ್ಗೆ ಮಾತನಾಡುವಾಗ - "ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ದೂರದ ದಾರಿ ಯಾವುದು" ಎಂದು ಕೇಳುವುದು ಅರ್ಥಪೂರ್ಣ ಎನ್ನುತ್ತಾರೆ. ಕಾಲಕ್ಕಾಗಿ - "ಕ್ಷಣದ ಹತ್ತನೇ ಒಂದು ಭಾಗದಲ್ಲಿ ನಿತ್ಯತೆ ಎಂಬ ಪದವನ್ನು ಉಚ್ಚರಿಸಲು ಬೇಕಾಗುವಷ್ಟು ಕಾಲ" ಇದನ್ನಳಿಯಲು ಸೂಚಿಸಿದ್ದಾರೆ. ಆದಾಗ್ಯೂ, ಸ್ಥಳ -ಕಾಲಕ್ಕೆ "ನೀವು ನಿದ್ರಿಸುವ ಮುನ್ನ ಮನಸ್ಸನ್ನು ಆಕಾಶದ ಎರಡು ಚುಕ್ಕೆಗಳ ಮೇಲೆ ಸ್ಥಿರಗೊಳಿಸಿ, ಕನಸಿನಲ್ಲಿ ಒಂದು ಚುಕ್ಕೆಯಿಂದ ಮತ್ತೊಂದಕ್ಕೆ ಕ್ರಮಿಸಲು ಬೇಕಾಗುವ ಸಮಯವನ್ನು ಲೆಕ್ಕಹಾಕಿ " ಎಂದು ಹೇಳುತ್ತಾರೆ. 'ಕನಸಿನಲ್ಲಿ' ಎಂಬ ಮಾತು ನನ್ನಲ್ಲಿ ಬೇರೂರಿಬಿಟ್ಟಿದೆ. ಟಾರ್ಡ್ಯೂ,ಬಾಬ್ ವಿಲ್ಸನ್ ಭೇಟಿಯಾದಂತೆ ಭಾಸವಾಗುತ್ತದೆ. ಸ್ಯಾಮ್ಯುಯೆಲ್ ಬೆಕೆಟ್, ವಿನ್ನಿ ಪಾತ್ರದ ಮೂಲಕ ಹೇಳಿಸುವ 'ಒಹ್ ಎಷ್ಟು ಸುಂದರವಾದ ದಿನ 'ಎಂಬ ಮಾತುಗಳಿಂದ ವಿಶ್ವರಂಗಭೂಮಿಯ ಅಲ್ಪಕಾಲಿಕ ಅನನ್ಯತೆಯ ಸಾರಾಂಶವನ್ನು ತಿಳಿಯಬಹುದಾಗಿದೆ. ಬರೆಯಲು ದೊರಕಿದ ಈ ಅವಕಾಶ ನನಗೆ ಗೌರವ ತಂದೊಡ್ಡಿದಂತೆ ಭಾಸವಾಗುತ್ತಿದೆ. ಈ ಸಂದೇಶದ ಬಗ್ಗೆ ಚಿಂತಿಸುತ್ತಿದ್ದಾಗ ಈ ಎಲ್ಲ ದೃಶ್ಯಗಳ ಎಲ್ಲ ಕನಸುಗಳೂ ನೆನಪಾದವು. ಹಾಗಾಗಿ, ಈ ಯುನೆಸ್ಕೋ ಸಭಾಂಗಣಕ್ಕೆ ನಾನೊಬ್ಬಳೇ ಬರಲಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಅಭಿನಯಿಸಿದ ಎಲ್ಲ ಪಾತ್ರಗಳೂ ನನ್ನೊಂದಿಗಿವೆ. ಪರದೆ ಸರಿದಾಗ ಮರೆಯಾಗುವಂತೆ ಕಾಣುವ ಪಾತ್ರಗಳು, ನನ್ನಂತರಂಗದಲ್ಲಿ ಒಳಜೀವವನ್ನು ಕೆತ್ತಿದ ಪಾತ್ರಗಳು, ಮುಂಬರುವ ಪಾತ್ರಗಳನ್ನು ಪೋಷಿಸಲೋ ಅಥವಾ ನಾಶಗೊಳಿಸಲೋ ಕಾಯುತ್ತಿವೆ. ಫೇಡ್ರ , ಅರಮಿಂಟೆ, ಒರ್ಲ್ಯಾಂಡೊ, ಹೆಡ್ಡ ಗಾಬ್ಲೆರ್, ಮೆಡಿಯಾ, ಮಾರ್ತೆಯ್, ಬ್ಲ್ಯಾಂಚ್ ಡು ಬ್ವಾ ..... ನಾನು ಪ್ರೀತಿಸಿದ, ಮೆಚ್ಚಿದ ಪಾತ್ರಗಳು ವೀಕ್ಷಕಳಾಗಿ ನನ್ನೊಂದಿಗೆ ಸೇರಿಕೊಂಡಿವೆ. ಹಾಗಾಗಿ ನಾನು ಈ ಜಗತ್ತಿಗೆ ಸೇರಿದ್ದೇನೆ. ನಾನು ಗ್ರೀಕ್, ಆಫ್ರಿಕನ್, ಸಿರಿಯನ್, ವೆನಿಶಿಯನ್, ರಷ್ಯನ್, ಬ್ರೆಜಿಲಿಯನ್, ಪರ್ಷಿಯನ್, ರೋಮನ್, ಜಾಪ್ನೀಸ್, ನ್ಯೂಯಾರ್ಕರ್, ಮಾರ್ಶಿಲಿಯಸ್, ಫಿಲಿಪಿನೋ, ಅರ್ಜೆಂಟಿನಿಯನ್, ನಾರ್ವೆಜಿಯನ್, ಕೊರಿಯನ್, ಜರ್ಮನ್, ಆಸ್ಟ್ರೇಲಿಯನ್, ಇಂಗ್ಲಿಷ್ ......... ನನ್ನೊಳಗಿನ (ಈ ಮೇಳದ) ಸಮಗ್ರ ಸದ್ಗುಣಗಳ ಮೂಲಕ ನಾನೊಬ್ಬ ಜಗತ್ತಿನ ಸತ್ಪ್ರಜೆ. ಈ ವೇದಿಕೆಯಲ್ಲಿ, ರಂಗಭೂಮಿಯಲ್ಲಿ, ನಾವು ನಿಜವಾದ ಜಾಗತೀಕರಣವನ್ನು ಕಾಣಬಹುದು.

೧೯೬೨ರ ವಿಶ್ವರಂಗ ಭೂಮಿ ದಿನಾಚರಣೆಯ ದಿನದಂದು, ಒಂದು ಶತಮಾನದ ಹೋರಾಟದ ಫಲವಾಗಿ ರಾಷ್ಟ್ರೀಯ ನಾಟಕ ಶಾಲೆ ಆರಂಭವಾಯಿತು ಎಂದು ಲಾರೆನ್ಸ್ ಆಲಿವರ್ ಘೋಷಿಸಿದರು. ಅದನ್ನು ರಂಗ ಪ್ರಶಿಕ್ಷಣ

ಕೇಂದ್ರವಾಗಿ ಅಂತಾರಾಷ್ಟ್ರೀಯ ಮಟ್ಟಕ್ಕೇರಿಸಬೇಕೆದು ಕನಸು ಕಂಡಿದ್ದರು. ಶೇಕ್ಸ್ ಪಿಯರ್ ಜಗತ್ತಿನ ನೆಂಟನೆಂದು ಅವರಿಗೆ ಗೊತ್ತಿತ್ತು. ಈ ಸಂದೇಶ ಬರೆಯಲು ಸಂಶೋಧಿಸುವಾಗ ೧೯೬೨ ರ ವಿಶ್ವ ರಂಗ ಭೂಮಿ ಸಂದೇಶ ಬರೆಯಲು ಜಾನ್ ಕಕೋವ್ ಗೆ ವಹಿಸಿದ್ದು, ಅವರು 'ಅರೌಂಡ್ ದಿ ವರ್ಲ್ಡ್ ಇನ್ ೮೦ ಡೇಸ್ ' ಎಂಬ ಕೃತಿಯ ರಚನಕಾರರಾಗಿ ಯೋಗ್ಯ ವ್ಯಕ್ತಿಯೆಂದು ಸಂತಸಪಟ್ಟೆ. ನನ್ನ ೮೦ ರಂಗ ಪ್ರದರ್ಶನಗಳ ಅಥವಾ ೮೦ ಚಲನಚಿತ್ರಗಳ ಮೂಲಕ ಜಗತ್ತನ್ನು ವಿಭಿನ್ನವಾಗಿ ಸುತ್ತಾಡಿದಂತೆ ನನ್ನ ಗ್ರಹಿಕೆಗೆ ಬಂತು. ಚಲನ ಚಿತ್ರಗಳನ್ನು ಇಲ್ಲಿ ಸೇರಿಸಿದ್ದು ರಂಗಭೂಮಿ ಮತ್ತು ಚಲನಚಿತ್ರಗಳ ನಡುವೆ ತಾರತಮ್ಯವಿಲ್ಲವೆಂಬ ಸತ್ಯವನ್ನು ತಿಳಿಸಲು. ನಾನು ಇದನ್ನು ಪ್ರತಿಬಾರಿ ಹೇಳಿದಾಗಲೂ ಆಶ್ಚರ್ಯವೆಂದೆನಿಸುತ್ತದೆ.

ಇಲ್ಲಿ ಮಾತನಾಡುತ್ತಿರುವಾಗ, ನಾನು ನಾನಲ್ಲ, ನಾನು ನಟಿಯಲ್ಲ, ರಂಗಭೂಮಿಯು ತನ್ನ ವಾಹಕವಾಗಿ ಬಳಸಿ ಹೊರಬರುವ ಹಲವು ಮಂದಿಯ ಹಾಗೆ ನಾನು ಒಬ್ಬಳು. ಇದನ್ನು ಗ್ರಹಿಸುವುದು ನನ್ನ ಕರ್ತವ್ಯ. ಬೇರೆ ಮಾತಿನಲ್ಲಿ ಹೇಳುವುದಾದರೆ ನಮ್ಮಿಂದ ರಂಗಭೂಮಿಯ ಅಸ್ತಿತ್ವವಲ್ಲ. ರಂಗಭೂಮಿಯಿಂದ ನಮ್ಮ ಅಸ್ತಿತ್ವ. ಅದಕ್ಕಾಗಿ ರಂಗಭೂಮಿಗೆ ಧನ್ಯವಾದಗಳು. ರಂಗಭೂಮಿ ಪ್ರಬಲವಾಗಿದೆ. ಅದು ಎಲ್ಲವನ್ನು ಎದುರಿಸಿ ನಿಲ್ಲಬಲ್ಲದು, ಯುದ್ಧವನ್ನು, ಸೆನ್ಸಾರನ್ನು, ಕಡು ಬಡತನವನ್ನು.

ರಂಗವೇದಿಕೆ ಅನಿರ್ದಿಷ್ಟ ಕಾಲದ ಒಂದು ನಗ್ನ ದೃಶ್ಯ-ಎಂದು ಹೇಳಿದರೆ ಸಾಕು. ಅಗತ್ಯವಿರುವುದು ಒಬ್ಬ ನಟ ಅಥವಾ ಒಬ್ಬ ನಟಿ, ಅವರು ಏನು ಮಾಡುತ್ತಾರೆ, ಅವರು ಏನು ಹೇಳುತ್ತಾರೆ, ಅವರು ಮಾತನಾಡುತ್ತಾರೆಯೇ? ಜನ ಕಾಯುತ್ತಾರೆ,ಆಗ ತಿಳುಯುತ್ತದೆ. ಸಭಿಕರಿಲ್ಲದೆ ರಂಗಭೂಮಿ ಇಲ್ಲ ಎಂಬುದನ್ನು ಮರೆಯದಿರಿ. ಒಬ್ಬನಿದ್ದರೂ ಅವನು ಪ್ರೇಕ್ಷಕನೆ . ಆದರೆ ಬಹಳ ಆಸನಗಳು ಖಾಲಿಯಾಗಿ ಉಳಿಯಬಾರದೆಂದು ಆಶಿಸೋಣ. ಲೋನೆಸ್ಕೋ ಪ್ರೊಡೆಕ್ಷನ್ಸ್ ನ ಪ್ರಯೋಗಗಳು ಯಾವಾಗಲೂ ತುಂಬಿರುತ್ತದೆ, ಹಾಗು ಆತ ಈ ಕಲಾಶೌರ್ಯವನ್ನು ಸುಂದರವಾಗಿ ಪ್ರತಿನಿಧಿಸುತ್ತಾರೆ - ಅವರ ಒಂದು ನಾಟಕದ ಕೊನೆಯಲ್ಲಿ ವೃದ್ಧೆಯೊಬ್ಬಳು 'ಸರಿ ಸರಿ ವೈಭವದಿಂದ ಮರಣಿಸೋಣ, ನಾವು ಸತ್ತು ದಂತಕತೆಯಾಗೋಣ, ಕನಿಷ್ಟ ನಮಗೊಂದು (ಹೆಸರಿನಲ್ಲೊಂದು ) ಬೀದಿ ದಕ್ಕೀತು.

ವಿಶ್ವ ರಂಗಭೂಮಿ ದಿನಾಚರಣೆ ೫೫ ವರ್ಷಗಳಿಂದಲೂ ಅಸ್ತಿತ್ವದಲ್ಲಿದೆ. ಈ ೫೫ ವರ್ಷಗಳಲ್ಲಿ ಎಂಟನೇ ಮಹಿಳೆಯಾಗಿ ಈ ಸಂದೇಶವೊಂದನ್ನು ನೀಡಲು ಆಮಂತ್ರಣ ಪಡದಿದ್ದೇನೆ. ಇದನ್ನು ನೀವು 'ಸಂದೇಶ'ಎಂದು ಕರೆಯಲಡ್ಡಿಯಿಲ್ಲ. ನಮ್ಮ ಹಿಂದಿನವರು (ಒಹ್ ! ಅದು ಹೇಗೆ ಪುರುಷ ಜಗತ್ತು ತನ್ನಮೇಲೆ ತಾನೇ ಹೇರಿಕೊಂಡಿದೆ!) ರಂಗಕಲ್ಪನೆ, ಸ್ವಾತಂತ್ರ್ಯ ಮತ್ತು ಸ್ವೋಪಜ್ಞತೆಯ ರಂಗಭೂಮಿಯ ಬಗ್ಗೆ ಮಾತನಾಡಿದರು, ಸೌಂದರ್ಯ, ಬಹು ಸಂಸ್ಕೃತಿಯನ್ನು ಪ್ರಚೋದಿಸುವ ಸಲುವಾಗಿ ಮತ್ತು ಪ್ರತ್ಯುತ್ತರಗಳನ್ನು ಕೊಡಲಾಗದ ಪ್ರಶ್ನೆಗಳನ್ನು ಮುಂದಿಟ್ಟರು. ೨೦೧೩ ರಲ್ಲಿ, ನಾಲ್ಕು ವರ್ಷಗಳ ಹಿಂದೆ ದಾರಿಯೊ ಫೋ ಹೇಳಿದ್ದರು - ಈ ಬಿಕ್ಕಟ್ಟನ್ನು ಎದುರಿಸುವ ಒಂದೇ ಒಂದು ಪರಿಹಾರವೆಂದರೆ ನಮ್ಮಗಳ ವಿರುದ್ಧ ಮತ್ತು ರಂಗಕಲೆಯನ್ನು ಕಲಿಯಲಿಚ್ಛಿಸುವ ಯುವ ಪೀಳಿಗೆ ವಿರುದ್ಧ ಒಂದು ವ್ಯವಸ್ಥಿತ ಬೃಹತ್ ಬಹಿಷ್ಕಾರವಾಗಬೇಕೆಂದು ಆಶಿಸುವುದು. ಹೀಗೆ ಚದುರಿ ಹೋಗುವ ವಿದೂಷಕರು ರಂಗನಿರ್ಮಾಪಕರನ್ನು ಹೊಸ ರೀತಿಯ ಪ್ರತಿನಿಧ್ಯಕ್ಕೆ ನಿಸ್ಸಂದೇಹವಾಗಿ ಈ ಹೇರಿಕೆಯಿಂದ ಅನೂಹ್ಯ ಲಾಭ ಪಡೆಯಬಹುದು. ಅನೂಹ್ಯ ಲಾಭ-ರಾಜಕೀಯ ವಾಕ್ಚಾತುರ್ಯಕ್ಕೆ ಅಳವಡಿಸಿಕೊಳ್ಳಬಹುದಾದ ಸೂತ್ರದಂತೆ ಅನಿಸುತ್ತದೆ. ನಿಮಗನಿಸುವುದಿಲ್ಲವೇ?

ನಾನು ಪ್ಯಾರಿಸ್ ನಲ್ಲಿರುವುದರಿಂದ,ಸಧ್ಯದಲ್ಲೇ ನಡೆಯುವ ಅಧ್ಯಕ್ಷೀಯ ಚುನಾವಣೆಗೆ ಮುನ್ನ, ನನ್ನ ಸೂಚನೆಯಿದು - ನಮ್ಮನ್ನು ಆಳಲು ಬರುವವರಿಗೆ ರಂಗಭೂಮಿಯಿಂದಾಗುವ ಅನೂಹ್ಯ ಲಾಭದ ಅರಿವಿರಬೇಕು. ಆದರೆ, ನಾನು ಒತ್ತಿ ಹೇಳುತ್ತೇನೆ, ಮಾಟ ಮಂತ್ರಗಳಿಲ್ಲದೆ.

ರಂಗಭೂಮಿ ನನಗೆ ಬೇರೆಯದನ್ನು ಪ್ರತಿನಿಧಿಸುತ್ತಿದೆ - ಅದು ಪರಸ್ಪರ ಸಂಭಾಷಣೆ, ಅದು ದ್ವೇಷದ ಗೈರು ಹಾಜರಿ. 'ಜನರ ನಡುವಿನ ಮಿತ್ರತ್ವ '. ಈಗ, ಇದರ ಅರ್ಥವೇನೆಂದು ತಿಳಿದಿಲ್ಲ. ಆದರೆ ನನಗೆ ಸಮುದಾಯದಲ್ಲಿ, ನಟರ - ಪ್ರೇಕ್ಷಕರ ನಡುವಿನ ಸ್ನೇಹ, ರಂಗಭೂಮಿಯು ಒಟ್ಟುಗೂಡಿಸುವ ಅನುವಾದಕರು, ಶಿಕ್ಷಕರು, ವಸ್ತ್ರ ವಿನ್ಯಾಸಕರು, ರಂಗ ಕಲಾವಿದರು, ಶಿಕ್ಷಣ ತಜ್ಞರು ಮತ್ತು ಪ್ರೇಕ್ಷಕರು- ಎಲ್ಲರ ನಡುವಿನ ಶಾಶ್ವತ ಸಂಬಂಧಗಳಲ್ಲಿ ನಂಬಿಕೆ ಇದೆ. ರಂಗಭೂಮಿ ನಮ್ಮನ್ನು ರಕ್ಷಿಸುತ್ತದೆ; ಅದು ನಮಗೆ ಆಶ್ರಯ ನೀಡುತ್ತದೆ. ರಂಗ ಭೂಮಿಯನ್ನು ನಾವು ಪ್ರೀತಿಸಿದಷ್ಟೂ ಅದು ನಮ್ಮನ್ನು ಪ್ರೀತಿಸುತ್ತದೆಂದು ನಂಬಿದ್ದೇನೆ.

ನಾನು ಕೆಲಸ ಮಾಡಿದ ಹಳೆಯ ಶೈಲಿಯ ನಿರ್ದೇಶಕರ, ರಾತ್ರಿ ಪರದೆ ಏಳುವ ಮುನ್ನ ನಿಚ್ಚಳವಾದ ಜೋರಾದ ಕೂಗು ನೆನಪಾಗುತ್ತದೆ - 'ರಂಗಭೂಮಿಗೆ ದಾರಿ ಕೊಡಿ' . ಇದು ಈ ರಾತ್ರಿಯ ನನ್ನ ಕೊನೆ ಪದಗಳು. .

===========

ಇಂಗ್ಲಿಷ್ ಅನುವಾದ - ಮೆಲೊರಿ ಡೊಮೆಸಿನ್ ಮತ್ತು ಟಾಮ್ ಜಾನ್ಸನ್

ಕನ್ನಡಕ್ಕೆ - ಶ್ರೀಕಂಠ ಗುಂಡಪ್ಪ
(#೫೭, ೩ನೇ ಮುಖ್ಯ ರಸ್ತೆ , ೩ನೇ ಅಡ್ಡ ರಸ್ತೆ , ಬ್ಯಾಂಕ್ ಕಾಲೋನಿ , ಬೋಗಾದಿ , ಮೈಸೂರು ೫೭೦೦೨೬)
+91 9986006625 , sreekanta.gundappa@gmail.com